## ಎನ್‌ಐಟಿಕೆಯಲ್ಲಿ 50 ವರ್ಷದಿಂದ ನಡೆದುಕೊಂಡು ಬಂದ ಪದ್ಧತಿ

# ವಿದ್ಯಾರ್ಥಿಗಳಿಗೆ ಬೆಳ್ಳಿ ಉಂಗುರ ಪ್ರದಾನ

**ಮಂಗಳೂರು:** ಸುರತ್ಕಲ್‌ನ ರಾಷ್ಟ್ರೀಯ ತಂತ್ರಜ್ಞಾನ ಸಂಸ್ಥೆ (ಎನ್‌ಐಟಿಕೆ)ಯಲ್ಲಿ ಪದವಿ ಪಡೆದ ಒಟ್ಟು 2,100 ವಿದ್ಯಾರ್ಥಿಗಳಿಗೆ ಶುಕ್ರವಾರ ಪದವಿಯೊಂದಿಗೆ ವಾರ್ಷಿಕ ಬೆಳ್ಳಿ ಉಂಗುರ ಪ್ರದಾನ ಸಮಾರಂಭ ಕ್ಯಾಂಪಸ್ ಆವರಣದಲ್ಲಿ ನೆರವೇರಿತು.

ಯಾವುದೇ ತಾಂತ್ರಿಕ ಸಂಸ್ಥೆಗಳಲ್ಲಿ ಕಾಣ ಸಿಗದ ಈ ವಿಶಿಷ್ಟ ಪರಂಪರೆಯನ್ನು ಸುಮಾರು 50 ವರ್ಷಗಳ ಹಿಂದೆ ಪ್ರೊ. ಎ.ಎಸ್.ಅಡ್ಕೆ ಪ್ರಾರಂಭಿಸಿದ್ದರು. ಈ ಸಮಾರಂಭದ ವಿಶೇಷತೆಯೆಂದರೆ ಅಧ್ಯಾಪಕರು ಸ್ವತಃ ತಮ್ಮ ವಿದ್ಯಾರ್ಥಿಗಳಿಗೆ ಉಂಗುರವನ್ನು ತೊಡಿಸಿ ಶುಭ ಹಾರೈಸುತ್ತಾರೆ.

ಬಿಟೆಕ್‌ನ 988, ಎಂಟೆಕ್‌ನ 708 ವಿದ್ಯಾರ್ಥಿಗಳು, 154 ಪಿಎಚ್.ಡಿ ಸಂಶೋಧಕರು, ಎಂಬಿಎನ 75, ಎಂಸಿಎ 67, ಎಂ.ಟೆಕ್ (ಸಂಶೋಧನೆ) 40, ಎಂಎಸ್ಸಿ (ಭೌತಶಾಸ್ತ್ರ) 34 ಹಾಗೂ ಎಂಎಸ್ಸಿ (ರಸಾಯನಶಾಸ್ತ್ರ) 34 ವಿದ್ಯಾರ್ಥಿಗಳು ಬೆಳ್ಳಿ ಉಂಗುರದ ಪ್ರದಾನಕ್ಕೆ ಪಾತ್ರರಾದರು.

ಬೆಂಗಳೂರಿನ ವನ್ಯಜೀವಿ ಅಧ್ಯಯನ ಕೇಂದ್ರದ ನಿವೃತ್ತ ನಿರ್ದೇಶಕರು ಹಾಗೂ ಎನ್‌ಐಟಿಕೆಯ ಹಳೆಯ ವಿದ್ಯಾರ್ಥಿ ಪದ್ಮಶ್ರೀ ಡಾ. ಕೋಟ ಉಲ್ಲಾಸ್ ಕಾರಂತ್ ಮುಖ್ಯ ಅತಿಥಿಗಳಾಗಿ, ಸಂರಕ್ಷಣಾ ಜೀವಶಾಸ್ತ್ರವು ಇಂಜಿನಿಯರಿಂಗ್ ಅಥವಾ ವೈದ್ಯಕೀಯ ವಿಜ್ಞಾನದಂತೆಯೇ ಮೂಲತತ್ವಗಳನ್ನು ಬಳಸಿ ನೈಜ ಜಗತ್ತಿನ ಸಮಸ್ಯೆಗಳನ್ನು ಪರಿಹರಿಸುವ ಒಂದು ಅನ್ವಯಿಕ ವಿಜ್ಞಾನವಾಗಿದೆ. ಅಪಾಯದಲ್ಲಿರುವ ಪ್ರಜಾತಿಗಳ ಪುನರುಜ್ಜೀವನ, ಮಾನವ-ವನ್ಯಜೀವಿ ಸಂಘರ್ಷ ತಡೆಗಟ್ಟುವಿಕೆ ಬಗ್ಗೆ ವಿವರಿಸಿದರು.




ಎನ್‌ಐಟಿಕೆಯಲ್ಲಿ ಪದವಿ ಪಡೆದ 2,100 ವಿದ್ಯಾರ್ಥಿಗಳಿಗೆ ಬೆಳ್ಳಿ ಉಂಗುರ ಪ್ರದಾನ ಮಾಡಲಾಯಿತು. ಡಾ. ಕೋಟ ಉಲ್ಲಾಸ್ ಕಾರಂತ್ ಪ್ರೊ. ಬಿ. ರವಿ ಮತ್ತಿತರರಿದ್ದರು.

ಅಧ್ಯಕ್ಷತೆ ವಹಿಸಿದ್ದ ಎನ್‌ಐಟಿಕೆ ನಿರ್ದೇಶಕ ಪ್ರೊ. ಬಿ.ರವಿ ಮಾತನಾಡಿ, ಸಮುದ್ರ ತೀರ ಮತ್ತು ಪಶ್ಚಿಮ ಘಟ್ಟಗಳ ಮಡಿಲಲ್ಲಿರುವ ಎನ್‌ಐಟಿಕೆ ವಿದ್ಯಾರ್ಥಿಗಳಿಗೆ ಪ್ರಕೃತಿಯೊಂದಿಗೆ ಬೆರೆಯಲು ಸಿಗುವ ವಿಶೇಷ ಅವಕಾಶಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ನಾಲ್ಕೈದು ದಶಕಗಳ ಹಿಂದಿನ ಹಳೆಯ ವಿದ್ಯಾರ್ಥಿಗಳು ಇಂದಿಗೂ ತಮ್ಮ ಬೆಳ್ಳಿ ಉಂಗುರವನ್ನು ಹೆಮ್ಮೆಯಿಂದ ಧರಿಸುವುದು ಈ ಸಂಪ್ರದಾಯದ ಗಟ್ಟಿತನಕ್ಕೆ ಸಾಕ್ಷಿ ಎಂದರು.

ವಿದ್ಯಾರ್ಥಿ ಕಲ್ಯಾಣ ವಿಭಾಗದ ಡೀನ್ ಪ್ರೊ.ಗೋವಿಂದರಾಜ್ ಮಂಡೇಲಾ, ಶೈಕ್ಷಣಿಕ ವಿಭಾಗದ ಡೀನ್ ಪ್ರೊ.ದ್ವಾರಕೀಶ್ ಮತ್ತಿತರರಿದ್ದರು.

Vijayavani, Date: 26/04/2026, p.02